ಶ್ರೀ ವಸಂತ ಸಾಲಿಯಾನ.—ಈಗ ಕಾಮಗಾರಿ ನಿಂತುಹೋಗಿದೆ. ಕೆಲಸ ನಡೆಯುತ್ತಿಲ್ಲ. ನಾನು ಬೆಲ್ಲೇ ಇರುವವನು. ಪ್ರತಿದಿವಸ ಅಲ್ಲಿ ಏನು ನಡೆಯುತ್ತಿದೆ ಎಂಬುದನ್ನು ನೋಡುತ್ತಿದ್ದೇನೆ. ಕೆಲಸ ಆಗ ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ವಿ. ಎಲ್. ಪಾಟೀಲ್.—ಮಾಡುತ್ತೇವೆ.

ಅಧ್ಯಕ್ಷರು.—ಈಗ ಸಭೆ ಪ್ರಾರಂಭವಾಗಿ 1 ಗಂಟೆ ಆಯಿತು. ಇನ್ನೂ 9 ಪ್ರಶ್ನೆಗಳು ಉಳಿದಿವೆ. ಇದನ್ನು ಲ್ಯಾಪ್ಸ್ ಮಾಡಬಹುದಾಗಿತ್ತು. ಆದರೆ ಸ್ಪೆಷಲ್ ಕೇಸ್ ಎಂದು ಪರಿಗಣಿಸಿ ಇವುಗಳನ್ನೆಲ್ಲಾ ತೆಗೆದುಕೊಳ್ಳುತ್ತಿದ್ದೇನೆ. ಆದಷ್ಟು ಬೇಗ ಅರ್ಧ ಗಂಟೆಯಲ್ಲಿ ಎಲ್ಲಾ ಮುಗಿಸೋಣ.

ವಿಷಯ : ಕೃಷ್ಣ ಗೋದಾವರಿ ಆಯೋಗದವರು ಮಾಡಿರುವ ನೀರಿನ ಹಂಚಿಕೆ

ಪ್ರಶ್ನೆ ಸಂಖ್ಯೆ 22 (166) ಶ್ರೀ ಎಸ್. ಎಸ್. ಕಡಪಟ್ಟಿ (ಹುನುಗುಂದ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಕೃಷ್ಣಾ ಗೋದಾವರಿ ನಿಯೋಗದಿಂದ ರಾಜ್ಯಕ್ಕೆ ನಿಗದಿ ಪಡಿಸಿರುವ ನೀರಿನ ಪ್ರಮಾಣ ,

ಆ) ಕೃಷ್ಣಾ ಗೋದಾವರಿ ನಿಯೋಗದಿಂದ ನಿಗದಿಪಡಿಸಿರುವ ಪೂರ್ತಿ ನೀರನ್ನು ಕ್ರಿ. ಶ. 2000ದ ಒಳಗೆ ಉಪಯೋಗಿಸಿಕೊಳ್ಳಲು ಸರ್ಕಾರವು ತೆಗೆದುಕೊಂಡಿರುವ ಕ್ರಮ (ಯೋಜನಾವಾರು ಮತ್ತು ವಾರ್ಷಿಕವಾರು ವಿವರವನ್ನು ಮಂಡಿಸುವುದು);

ಇ) ತಗಲುವ ವೆಚ್ಚ ಮತ್ತು ಈ ವಿಷಯದಲ್ಲಿ ತೊಂದರೆಗಳನ್ನು ಹೇಗೆ ನಿವಾರಿಸಲು ಸರ್ಕಾರವು ಯೋಚಿಸಿದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಕೃಷ್ಣಾ ನೀರಿನ ವಿವಾದ ನ್ಯಾಯಮಂಡಳಿ ತೀರ್ಪಿನಂತೆ ಕೃಷ್ಣಾ ಜಲಾನಯನದಲ್ಲಿ ರಾಜ್ಯಕ್ಕೆ ನಿಗದಿ ಪಡಿಸಿರುವ ನೀರಿನ ಪ್ರಮಾಣ 734 ಟಿಎಂಸಿ (ಸಹಸ್ರ ದಶಲಕ್ಷ ಘನ ಅಡಿಗಳು) ಗೋದಾವರಿ ನೀರಿನ ವಿವಾದದ ನ್ಯಾಯಮಂಡಲಿಯ ತೀರ್ಪಿನಿಂದಾಗಿ ಗೋದಾವರಿ ಜಲಾನಯನ ಪ್ರದೇಶ ನೀರಿನ ತಿರುಗಣಿಯಿಂದ ಕೃಷ್ಣಾ ಜಲಾಶಯದಲ್ಲಿ ಕರ್ನಾಟಕಕ್ಕೆ ನಿಗದಿಯಾಗಿರುವ ಹೆಚ್ಚಿನ ನೀರಿನ ಪ್ರಮಾಣ 21 ಟಿಎಂಸಿ. ಗೋದಾವರಿ ನೀರಿನ ವಿವಾದದ ನ್ಯಾಯ ಮಂಡಲಿಯ ತೀರ್ಪಿನಿಂದ ಕರ್ನಾಟಕದ ಗೋದಾವರಿ ಜಲಾನಯನದ ಮಂಜ್ರಾ ಉಪ ಜಲಾನಯನದಲ್ಲಿ ನಿಗದಿಯಾಗಿರುವ ನೀರಿನ ಪ್ರಮಾಣ 22.37 ಟಿಎಂಸಿ (ಅಂದರೆ 22 ಟಿಎಂಸಿ).

ಆ) ಮೇಲ್ಕಾಣಿಸಿದ 734 ಟಿಎಂಸಿ ನೀರಿನ ಯೋಜನಾವಾರು ನಿಗದಿ ಮಾಡಿರುವ ಪಟ್ಟಿ ಮಾಡಲಾಗಿದೆ. (ಕೃಷ್ಣಾ ಜಲಾನಯನಕ್ಕೆ ಸಂಬಂಧಿಸಿದ ವಿವರಣಾ ಪತ್ರ ಒಂದು) ಗೋದಾವರಿ ಜಲವಿವಾದ ನ್ಯಾಯ ಮಂಡಲಿ ತೀರ್ಪಿನಲ್ಲಿ ಗೋದಾವರಿಯಿಂದ ಕೃಷ್ಣಗೆ ತಿರುಗಣಿಯಾಗುವ ನೀರಿನಲ್ಲಿ ಕರ್ನಾಟಕ ರಾಜ್ಯಕ್ಕೆ ನಿಗದಿಯಾಗಿರುವ 21 ಟಿಎಂಸಿ ನೀರನ್ನು ಕೃಷ್ಣಾ ಮೇಲ್ದಂಡೆ ಯೋಜನೆಗೆ ಉಪಯೋಗಿಸಿಕೊಳ್ಳಲು ಯೋಜಿಸಲಾಗಿದೆ. ಕೃಷ್ಣಾ ಜಲಾನಯನದಲ್ಲಿ ನಿರ್ವಹಣೆಯಲ್ಲಿರುವ ಹಾಲಿ ನಡೆಯುತ್ತಿರುವ ಮತ್ತು ಮುಂದೆ ಯೋಜಿಸಲಾಗುವ ಯೋಜನೆಗಳ ವಿವರಗಳನ್ನು ವಿವರಣಾ ಪತ್ರ 1 ರಲ್ಲಿ ಕೊಟ್ಟಿದೆ.

ಗೋದಾವರಿ ನೀರಿನ ವಿವಾದದ ನ್ಯಾಯಮಂಡಲಿಯ ತೀರ್ಪಿನಲ್ಲಿ ಗೋದಾವರಿ ನದಿಯಿಂದ ಲಭ್ಯವಾಗುವ 22.37 ಟಿಎಂಸಿ ನೀರನ್ನು ನಿರ್ವಹಣೆಯಲ್ಲಿರುವ ಹಾಲಿ ನಡೆಯುತ್ತಿರುವ ಮತ್ತು ಮುಂದೆ ಯೋಜಿಸಲಾಗಿರುವ ಯೋಜನೆಗಳಿಗೆ ಉಪಯೋಗಿಸುವ ವಿವರಗಳನ್ನು ವಿವರಣಾ ಪತ್ರ 2ರಲ್ಲಿ ಕೊಟ್ಟಿದೆ.

ಇ) ಕೃಷ್ಣಾ ಜಲಾನಯನದಲ್ಲಿ ಈಗ ನಡೆಯುತ್ತಿರುವ ಭಾರಿ ಮತ್ತು ಮಾಧ್ಯಮ ನೀರಾವರಿ ಯೋಜನೆಗಳಿಗೆ ಬೇಕಾಗಿರುವ ಹಣ 1207 ಕೋಟಿ ರೂ.ಗಳು. ಕೃಷ್ಣಾ ಜಲಾನಯನದಲ್ಲಿ ಉದ್ದೇಶಿತ ಯೋಜನೆಗಳಿಗೆ ಬೇಕಾಗಿರುವ ಹಣ 788 ಕೋಟಿ ರೂ.ಗಳು ಗೋದಾವರಿ ಜಲಾನಯನ ಪ್ರದೇಶದಲ್ಲಿ ಈಗ ನಡೆಯುತ್ತಿರುವ ಭಾರಿ ಮತ್ತು ಮಾಧ್ಯಮ ನೀರಾವರಿ ಯೋಜನೆಗಳಿಗೆ ಬೇಕಾಗಿರುವ ಹಣ 38 ಕೋಟಿ ರೂ.ಗಳು. ಗೋದಾವರಿ ಜಲಾನಯನದಲ್ಲಿರುವ ಉದ್ದೇಶಿತ ಯೋಜನೆಗಳಿಗೆ ಬೇಕಾಗಿರುವ ಹಣ 5.13 ಕೋಟಿ ರೂ ಗಳು. ಈ ಯೋಜನೆಗಳಿಗೆ ಸರ್ಕಾರವು ವಾರ್ಷಿಕ ಆಯವ್ಯಯಗಳಲ್ಲಿ ಹಣ ಒದಗಿಸಲು ಯೋಜಿಸಿದೆ. 1985-86ನೇ ಸಾಲಿನಲ್ಲಿ 100 ಕೋಟಿ ರೂ.ಗಳು ತದರ್ಥಕ (ಅಡಹಾಕ್) ಕ್ಕಾಗಿ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗಿದೆ. ವಿಶ್ವಬ್ಯಾಂಕಿನ ಧನ ಸಹಾಯವನ್ನು ಕೂಡ ಅಪೇಕ್ಷಿಸಲು ಉದ್ದೇಶಿಸಲಾಗಿದೆ.

STATEMENT No. I

Allocation of Water Projects in Krishna Basin 734 TMC Master Plan.

Sl. No.	Name of Project	Allocation in TMC as per 734 TMC Plan
1	2	3
	K. 1, K. 2 and K 7 : Krishna Main Stem	
	K. 1 Sub Basin	
	Projects in Operation :	(0.49)
1	Minor Projects	0.49
	Projects under construction :	(4.02)
2	Minor Projects	0.02
3	Dudhaganga Project	4.00
	Proposed Projects :	(0.13)
4	Minor Projects	0.13
	Total K 1	4.64
	K. 2 Sub Basin	
	Projects in operation :	(5.81)
5	Areshankar	0.38
6	Chitwadgi	0.26
7	Minor Projects	5.17
	Projects under construction	(133.63)
8	Upper Krishna (Also vide Sl. No. 11)	119.00
9	Hippargi	12.81
10	Minor Projects	1.82
	Proposed Projects	
11	Upper Krishna (Also vide Sl. No. 8)	31.19
12	Don	....
13	Minor Projects	0.82
	Total K 2	171.45
	K 7 Sub Basin	
	Projects in operation :	(1·50)
14	Minor Projects	1.50
	Projects under construction :	(0.19)
15	Minor Projects	0.19
	Proposed projects :	
16	Minor Projects	0.15
	Total K 7	1.84

1	2		3
	ABSTRACT K. 1, K. 2 & K. 7		
	In operation	....	7.80
	Under Construction	....	133.84
	Proposed	....	36.20
			177.93
	K. 3 GHATAPRABHA		
	Projects in operation :		
17	Ghataprabha-Stages I & II (including Gokak Canal) (Also vide Sl. No. 20)	....	(37.81) 33.85
18	Kalaskop	....	0.33
19	Minor Projects	....	3.63
	Projects under construction :	....	(45.42)
20	Ghataprabha Stage-III (Also vide Sl. No. 17)	....	45.15
21	Minor Projects	...	0.27
	Proposed Projects :	....	(5.83)
22	Markandeya-Bellaryanala	....	5.00
23	Minor Projects	....	0.83
	Total	....	89.06
	K. 4 MALAPRABHA		
	Projects in operation :	....	(4.23)
24	Kolchi Weir	....	0.53
25	Minor Projects	....	3.70
	Projects under Construction :	....	(45.90)
26	Malaprabha	---	44 00
27	Harinala	....	0 80
28	Minor Projects	....	1.10
	Proposed Projects :	....	(10.15)
29	Upper Malaprabha	....	(4.66)
30	Ramthal lift	....	4.50
31	Minor Projects	....	0.99
	Total K 4	....	60.28

1	2		3
	K. 5 & K· 6 BHIMA		
	K 5 Upper Bhima		
	Projects in Operation :	....	(0.40)
32	Minor Projects	....	0.40
	Projects under construction :	....	(0.18)
33	Minor Projects	....	0.18
	Proposed Projects :		
34	Minor Projects	....	0.10
	Total K 5	....	0.68
	K. 6 Lower Bhima		
	Projects in operation :	....	(9.09)
35	Chandrampalli	....	1.90
36	Hathikoni	....	0.60
37	Ramanahalli	....	0.44
38	Nagathana	....	0.08
39	Minor Projects	....	6.17
	Projects under construction :	....	(15.04)
40	Bennithora	....	5.75
41	Upper Mullamari	....	1.24
42	Lower Mullamari	....	3.08
43	Amerja	....	1.92
44	Minor Projects	....	3.05
	Proposed Projects :	....	(20.72)
45	Bhima Irrigation	....	9.00
46	Bhima lift Irrigation	....	6.00
47	Gandhorinala	....	2.16
48	Kagna	....	2.00
49	Minor Projects	....	1.56
	Total	....	44.85
	ABSTRACT (K. 5 & K)		
	In Operation	....	9.40
	Under Construction	....	15.22
	Proposed	....	26.82
	Total	....	45.53

1	2		3
	K. 8. TUNGABHADRA		
	Projects in Operation :	....	(277.80)
50.	Tungabhadra	....	(132.00)
	a) LB LLC & LB HLC	....	92.00
	b) RB LLC	....	22.50
	c) RB HLC (I & II)	....	17.50
51	Bhadra Reservoir	....	61.70
52	Bhadra Anicut	....	3.10
53	Tunga Anicut	....	11.50
54	Jambadahalla	....	0.70
55	Anjanapur	....	2.50
56	Amligola	....	1.40
57	Dharma	....	2.20
58	Kanakanala	....	0.40
59	Hagaribommanahalli	....	2.20
60	Rajolibanda	....	1.20
61	Vijayanagar Channels	....	12.06
62	Minor Projects	....	47.04
	Projects under construction :	....	(13.75)
63	Maskinala	....	0.78
64	Narihalla	....	0.90
65	Minor Projects	....	12.07
	Proposed Projects :	....	(27.65)
66	Upper Bhadra	....	8.00
67	Tunga Lift Irrigation	....	....
68	Tungabhadra Lift (Singatallur)	....	8.00
69	Tungabhadra Lift (Bhairampad)	....	....
70	Madag–Masur	....	2.71
71	Hirehalla	....	2.27
72	Dandavathy	....	2.00
73	Arlihonda	....	1.20
74	Suntrahalli	....	1.00
75	Minor Projects	....	2.47
	Total	....	319.20
	K. 9 VEDAVATHY		
	Projects in Operation :	....	(40.82)
76	Vanivilas Sagar	....	8.20
77	Minor Projects	....	32.62
	Projects under Construction :	....	(1.18)
78	Jinigehalla	....	0.68
79	Feeder Channel to Ranikere	....	....
80	Minor Projects	....	0.50

1	2		3
	Proposed Projects :		
81	Minor Projects	....	....
	Total	....	42.00

STATEMENT–II

Statement showing the Projectwise figures for utilisation in Godavari Basin

Sl. No.	Name of Project		Utilisation in T.M.C.
1	2		3
	Projects in Operation		
1	Minor Projects	....	4.60
	Projects under Construction :		
2	Karanja Project	....	13.10
3	Chulkinala	....	1.17
	Proposed Projects		
4	Manjra Lift Scheme	....	1.00
5	In the catchment area in Karnataka draining down-stream of Nizamsagar		2.50
	Total	....	22.37 TMC
	Say	....	22 TMC

ಶ್ರೀ ಎಸ್. ಎನ್. ಕಡಪಟ್ಟಿ.—ಸ್ವಾಮಿ, ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಬರುವಂಥ 5 ಜಿಲ್ಲೆಗಳು, ಬರಗಾಲದಲ್ಲಿ ಶಾಶ್ವತವಾಗಿ ಕಷ್ಟಪಡುವಂಥ ಜಿಲ್ಲೆಗಳು ಎಂದು ತಮಗೆ ಗೊತ್ತಿದೆ. 2 ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣ ಇದಕ್ಕೆ ಬೇಕು ಎಂದು ಗೊತ್ತಿದ್ದರೂ ಹಣ ಒದಗಿಸಿಲ್ಲ. ವರ್ಷಕ್ಕೆ 70-75 ಕೋಟಿ ಕೊಟ್ಟರೆ 2000ನೆಯ ವರ್ಷದೊಳಗೆ ಕೆಲಸ ಮುಗಿಸುವುದಕ್ಕೆ ಸಾಧ್ಯವೇ ? ಹಣಕಾಸಿನ ವ್ಯವಸ್ಥೆ ಹೇಗೆ ಮಾಡುತ್ತೀರಿ ಎಂಬ ಪ್ರಶ್ನೆಯನ್ನು ಕೇಳಿದ್ದೆ. ಕೇಂದ್ರ ಸರ್ಕಾರದಿಂದ 100 ಕೋಟಿ ರೂಪಾಯಿಗಳನ್ನು ಕೇಳಿದ್ದೇವೆ ಎಂದು ಹೇಳಿದ್ದೀರಿ. ಅದು ಬಂದರೂ ಕೂಡ ಸಾಕಾಗುವುದಿಲ್ಲ. ಶಾಶ್ವತವಾಗಿ ಆ ಭಾಗದ ಬರಗಾಲ ನಿವಾರಣೆ ಆಗಬೇಕಾದರೆ, ಕೃಷ್ಣಾ ನದಿ ನೀರಿನ ಸಂಪೂರ್ಣ ಬಳಕೆ ಮಾಡಬೇಕಾದರೆ 15 ವರ್ಷಗಳಲ್ಲಿ ಯಾವರೀತಿ ಕೆಲಸ ಮುಗಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ನಿರ್ದಿಷ್ಟವಾದ ಉತ್ತರವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಹೇಳಿದಹಾಗೆ ಬರಗಾಲಪೀಡಿತ ಪ್ರದೇಶದಲ್ಲಿ ನದಿ ನೀರಿನ ಬಳಕೆ ಆಗತಕ್ಕದ್ದು ಸಹಜ. ಆದರೆ ಇವೊತ್ತು ರಾಜ್ಯ ಸರ್ಕಾರದ ಸಂಪನ್ಮೂಲದ ಚೌಕಟ್ಟಿನಲ್ಲಿ ಎಲ್ಲಾ ಕೆಲಸಗಳನ್ನೂ ಮುಗಿಸುವುದು ಕಷ್ಟ ಎಂಬ ಅರಿವಿನಿಂದ ಮೊದಲನೆಯ ಹಂತದ ಕೆಲಸಕ್ಕೆ ವಿಶ್ವಬ್ಯಾಂಕಿನಿಂದ ಹಣ ಪಡೆದುಕೊಳ್ಳುವುದಕ್ಕೆ ಪ್ರಯತ್ನ ನಡೆದಿರತಕ್ಕದ್ದು ತಮಗೆ ಗೊತ್ತಿದೆ. ಎರಡನೆಯ ಹಂತದ ಕೆಲಸಕ್ಕೂ ಕೂಡ ವಿಶ್ವಬ್ಯಾಂಕಿನಿಂದ ನೆರವು ಪಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರಕ್ಕೂ ವಿಶೇಷ ಧನಸಹಾಯ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇವೆ. ಸರ್ಕಾರ ಸಂಪನ್ಮೂಲದ ವೃದ್ಧಿ ಮಾಡಬೇಕಾದುದು ಅಗತ್ಯ ಎಂಬುದು ಗೊತ್ತಿದೆ. ಈ ಯೋಜನೆಗಳಿಗೆ ಸಾಧ್ಯವಾದಮಟ್ಟಿಗೆ ಆದ್ಯತೆ ಕೊಟ್ಟು ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಎನ್. ಕಡಪಟ್ಟಿ.—ನಮ್ಮ ಭಾಗವು ಬರಗಾಲ ಪರಿಸ್ಥಿತಿಗೆ ಸಿಕ್ಕಿ ಅಲ್ಲಿನ ಜನರಿಗೆ ತುಂಬಾ ಅನ್ಯಾಯವಾಗಿದೆ. ಇದರ ಬಗ್ಗೆ ಒಂದು ನಿಮಿಷ ಹೇಳುವುದಕ್ಕೆ ಅವಕಾಶ ಕೊಡಬೇಕೆಂದು ವಿನಂತಿಸುತ್ತೇನೆ. 15 ವರ್ಷಗಳಲ್ಲಿ ನೀರನ್ನು ಸಂಪೂರ್ಣ ಬಳಕೆ ಮಾಡದಿದ್ದರೆ, ಕರ್ನಾಟಕ ರಾಜ್ಯ ನೀರಿನಿಂದ ವಂಚಿತವಾಗುತ್ತದೆ, ಆ ಭಾಗ ಶಾಶ್ವತವಾಗಿ ಬರಗಾಲ ಪ್ರದೇಶವಾಗಿ ಉಳಿಯುತ್ತದೆ. ತಾವು ಏನಾದರೂ ಮಾಡಿ ದಾವೋದರ ವ್ಯಾಲಿ ಕಾರ್ಪೊರೇಷನ್, ಕೃಷ್ಣಾ ವ್ಯಾಲಿ ಕಾರ್ಪೊರೇಷನ್, ಅನ್ನು ಜಾಗತಿಕ ಬ್ಯಾಂಕಿನಿಂದ ಹಣ ತೆಗೆದು ಮಾಡಿಸಿ ಇಲ್ಲವೇ ಕೇಂದ್ರ ಸರ್ಕಾರ ಅಥವಾ ಅರಬ್ಬಿ ರಾಷ್ಟ್ರಕ್ಕಾದರೂ ಹೋಗಿ ಏನಾದರೂ ಮಾಡಿ ಪ್ರತಿ ವರ್ಷಕ್ಕೆ 250ರಿಂದ 300 ಕೋಟಿ ರೂಪಾಯಿಗಳನ್ನು ಕೊಟ್ಟರೆ ಮಾತ್ರ ಈ ಭಾಗಕ್ಕೆ ಅನುಕೂಲವಾಗುತ್ತದೆ ಇಲ್ಲದಿದ್ದರೆ ಈ ಭಾಗದ ಜನ ನಮ್ಮನ್ನು ತಪಿಸುತ್ತಾರೆ. ಇದರ ಬಗ್ಗೆ ತಾವು ದಯವಿಟ್ಟು ಸೂಕ್ತವಾಗಿ ವಿಚಾರ ಮಾಡಬೇಕೆಂದು ಅಧ್ಯಕ್ಷರ ಮೂಲಕ ತಮ್ಮನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಹೇಳಿದಹಾಗೆ ರಾಜ್ಯ ಸರ್ಕಾರದ ಸಂಪನ್ಮೂಲದಿಂದಲೇ ಮುಗಿಸುವುದು ಕಷ್ಟವೆಂದು ಅವರು ಅರ್ಥ ಮಾಡಿಕೊಂಡಿದ್ದಾರೆ. ಆದಕ್ಕೋಸ್ಕರವಾಗಿ ವಿಶ್ವಬ್ಯಾಂಕಿನಿಂದ ಮತ್ತು ಬೇರೆ ಬೇರೆ ಆರ್ಥಿಕ ನೆರವು ನೀಡತಕ್ಕಂತಹ ಸಂಸ್ಥೆಗಳಿಂದ ಹಣವನ್ನು ಪಡೆಯಬೇಕೆಂದು ಸರ್ಕಾರ ಪ್ರಾಮಾಣಿಕವಾಗಿ ತನ್ನ ಪ್ರಯತ್ನವನ್ನು ಮಾಡುತ್ತಿದೆ. ರಾಜ್ಯ ಸರ್ಕಾರದ ಸಂಪನ್ಮೂಲದಲ್ಲಿ 250-300 ಕೋಟಿ ರೂಪಾಯಿಗಳನ್ನು ಹಾಕತಕ್ಕಂಥಾದ್ದರ ಬಗ್ಗೆ ಈ ಸದನ ನಿರ್ಣಯ ಮಾಡಿದರೆ ನಾನು ಸ್ವಾಗತ ಮಾಡುತ್ತೇನೆ. 15 ವರ್ಷದಲ್ಲಿ ನೀರನ್ನು ಉಪಯೋಗ ಮಾಡಿಕೊಳ್ಳದೇ ಇದ್ದರೆ ನೀರಿನಿಂದ ವಂಚಿತವಾಗುತ್ತೇವೆಂಬ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ, ಅದಕ್ಕೆ ನಾವು ಅವಕಾಶ ಕೊಡುವುದಿಲ್ಲ. ಆ ರೀತಿಯ ಸಂಶಯ ಅವರಿಗೆ ಬೇಡವೆಂದು ಹೇಳುತ್ತೇನೆ. 734 ಟಿ.ಎಂ.ಸಿ. ನೀರನ್ನು 2 ಸಾವಿರ ಎ.ಡಿ. ಮೇ ರೆವ್ಯೂನಲ್ಲಿ ಬರುತ್ತದೆ ಎನ್ನತಕ್ಕಂಥಾದ್ದು ಇದೆ. ಅದರ ಒಳಗೆ ನೀರಿನ ಬಳಕೆಯ ಬಗ್ಗೆ ಯಾವ ಯಾವ ಯೋಜನೆಗಳಿಗೆ ಮಂಜೂರಾತಿ ಕೊಡಬೇಕು, ಹೇಗೆ ಕಮಿಟ್ ಮಾಡಬೇಕೆಂಬ ವಿಷಯವನ್ನು ತಪಾಸಣೆ ಮಾಡಿ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಹುನಗುಂದ ಭಾಗದಲ್ಲಿನ ನೀರನ್ನು ಉಪಯೋಗಿಸಲು ಕೃಷ್ಣ, ಗೋದಾವರಿ ಬೇಸಿನ್ ಯೋಜನೆಯೊಳಗೆ ಇದನ್ನು ಸೇರಿಸಿದ್ದೀರಾ ?

ಶ್ರೀ ಎಚ್. ಡಿ. ದೇವೇಗೌಡ.—ನೀರನ್ನು ಸಂಪೂರ್ಣ ಬಳಕೆ ಮಾಡತಕ್ಕಂಥಾದ್ದು ಒಂದು ಭಾಗ, ನೀರನ್ನು ಬಳಕೆಮಾಡಲು ಯೋಜನೆಗಳನ್ನು ಪ್ರಾರಂಭ ಮಾಡುವುದು ಇನ್ನೊಂದು ಭಾಗ. ಇದನ್ನು ಮಾನ್ಯ ಸಭೆಯ ಗಮನಕ್ಕೆ ತರಲು ಇಷ್ಟಪಡುತ್ತೇನೆ. ನಾಗಾರ್ಜುನ ಸಾಗರ ಕಟ್ಟತಕ್ಕಂತಹ ಕಾಲದಲ್ಲಿ ನೀರಿನ ಬಳಕೆ ಪೂರ್ಣವಾಗಿ ಆಗದೇ ಇದ್ದರೂ ಜಲಾಶಯ ನಿರ್ಮಾಣ ಮಾಡತಕ್ಕಂಥದ್ದನ್ನು ತೆಗೆದು ಕೊಂಡು ಅವಾರ್ಡ್ ತೀರ್ಪನ್ನು ಕೊಟ್ಟಿದ್ದಾರೆ, ಅದು ನಮ್ಮ ಮುಂದೆ ಇದೆ. ಈ ಎಲ್ಲಾ ಯೋಜನೆಗಳನ್ನು ಕಾರ್ಯಗತ ಮಾಡಬೇಕೆಂದರೆ ಕನಿಷ್ಟಪಕ್ಷ ಯೋಜನೆಗಳನ್ನು ಪ್ರಾರಂಭವಾದರೂ ಮಾಡಬೇಕು. ಅದಕ್ಕೆ ಹಣ ಬೇಕು. ಮಾಡದೇ ಇದ್ದರೆ ಹಕ್ಕುಚ್ಯುತಿ ಬರಬಹುದು. 734 ಟಿ.ಎಂ.ಸಿ. ನೀರನ್ನು ಬೇರೆ ಬೇರೆ ದೇಶದ ಆರ್ಥಿಕ ನೆರವನ್ನು ಪಡೆದುಕೊಳ್ಳಲು ಪ್ರಯತ್ನಮಾಡಿ ಅದು ಸಫಲವಾಗದೇ ಹೋದರೆ ರಾಜ್ಯ ಸರ್ಕಾರದ ಸಂಪನ್ಮೂಲದಿಂದ ಈ ಯೋಜನೆಗಳನ್ನು ಪ್ರಾರಂಭ ಮಾಡಲಿಕ್ಕೆ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ಅದರ ಬಗ್ಗೆ ತಮಗೆ ಸಂಶಯ ಬೇಡವೆಂದು ಹೇಳುತ್ತೇನೆ.

ಶ್ರೀ ಮದನಗೋಪಾಲ ನಾಯಕ್.—ಮಾನ್ಯ ಅಧ್ಯಕ್ಷರೇ, ಕೃಷ್ಣ ಮೇಲ್ದಂಡೆ ಯೋಜನೆ ಕಾರ್ಯ ಆಗುತ್ತಿದೆ. ಅಧಿಕಾರಿಗಳು ಹೇಳಿದ ಪ್ರಕಾರ 91 ಸಾವಿರ ಎಕರೆಗೆ ನೀರನ್ನು ಕೊಟ್ಟಿದ್ದೇವೆಂದು ಪತ್ರಿಕೆಯಲ್ಲಿ ಬಂದಿದೆ, ಅಲ್ಲಿ ಪ್ರತ್ಯಕ್ಷವಾಗಿ ಹೋಗಿ ನೋಡಿದರೆ 40 ಸಾವಿರ ಎಕರೆಗೆ ನೀರು ಹರಿದಿಲ್ಲ. ಈ ಬಗ್ಗೆ ಮಾನ್ಯ ಮಂತ್ರಿಯವರಿಗೆ ಪತ್ರದ ಮೂಲಕ, ಟೆಲಿಗ್ರಾಂ ಮೂಲಕ ತಿಳಿಸಿದೆ. ಅದರ ಬಗ್ಗೆ ಯಾವ ಕ್ರಮ ತೆಗೆದುಕೊಂಡಿದ್ದಾರೆ ? ಕೃಷ್ಣ ಮೇಲ್ದಂಡೆ ಯೋಜನೆಗೆ 2 ಸಾವಿರ ಕೋಟಿ ರೂಪಾಯಿಗಳು ಅಲ್ಲದೆ, 20 ಸಾವಿರ ಕೋಟಿ ರೂಪಾಯಿಗಳನ್ನು ತೆಗೆದುಕೊಂಡರೂ ಸಹ ಆ ಕೆಲಸ ಆಗುವ ಹಂತದಲ್ಲಿ ಉಳಿಯುವುದಿಲ್ಲ. ಅಲ್ಲಿಯ ಅಧಿಕಾರಿಗಳ ಭ್ರಷ್ಟತನ, ದುಡ್ಡು ಸೋರುವಿಕೆ ಅದನ್ನು ತಡೆಗಟ್ಟಿದರೆ ಮಾತ್ರ ಕೃಷ್ಣ ಮೇಲ್ದಂಡೆ ಯೋಜನೆ ಸರಿ ಹೋಗುತ್ತದೆಂದು ನನ್ನ ಅನಿಸಿಕೆ. ಆ ಅಧಿಕಾರಿಗಳ ಮೇಲೆ ತಾವು ಕ್ರಮ ತೆಗೆದುಕೊಂಡಿದ್ದರೆ ಅದನ್ನ ನಾನು ಸ್ವಾಗತಿಸುತ್ತೇನೆ.

ಅಧ್ಯಕ್ಷರು.—ತಾವು ಸಪ್ಲಿಮೆಂಟರಿ ಪ್ರಶ್ನೆಯಮೇಲೆ ಮಾತನಾಡಿ.

ಶ್ರೀ ಮದನಗೋಪಾಲ ನಾಯಕ್.—ಕೃಷ್ಣ ಮೇಲ್ದಂಡೆ ಯೋಜನೆಯಲ್ಲೂ ಸಹ ತಾವು ಕೂಲಂಕಷವಾಗಿ ವಿಚಾರಮಾಡಿ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ನಡೆದಿರತಕ್ಕಂತಹ ಅಕ್ರಮ, ಅವ್ಯವಹಾಗಳೇನಾದರೂ ಸನ್ಮಾನ್ಯ ಸದಸ್ಯರಿಗೆ ಗೊತ್ತಿದ್ದರೆ, ಈ ಸಭೆಯಲ್ಲೇ ಹೇಳಬೇಕೆಂದು ಹೇಳುವುದಿಲ್ಲ ಆಥವಾ ಬರವಣಿಗೆಯಲ್ಲಿ ಕೊಡಬೇಕೆಂದೂ ಹೇಳುವುದಿಲ್ಲ. ಓರಲ್ ಆಗಿ ಹೇಳಿದರೂ ಸಾಕು. ಯಾವ ಅಧಿಕಾರಿಯೇ ಇರಲಿ, ಯಾವ ಶ್ರೇಣಿಯ ಅಧಿಕಾರಿಯೇ ಇರಲಿ ಅದರ ಬಗೆ ಒಂದು ವಾರದಲ್ಲಿ ತನಿಖೆ ಮಾಡಿ ಈ ಸಭೆಯ ಮುಂದೆ ಅದನ್ನು ಮಂಡನೆ ಮಾಡುತ್ತೇನೆಂದು ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್,—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಹೇಳಿದರು, ಇದರ ಬಗ್ಗೆ ದೀರ್ಘವಾಗಿ ನಾನು ಚರ್ಚೆ ಮಾಡಲಿಕ್ಕೆ ಕೂಡ ಸಿದ್ಧರಾಗಿದ್ದೇವೆಂದು ಕಳೆದ ಅಧಿವೇಶನದಲ್ಲಿ ಕೃಷ್ಣ ಮೇಲ್ದಂಡೆ ಯೋಜನೆ ವಿಷಯವಾಗಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಪ್ರಶ್ನೆ ಎತ್ತಿದಾಗ ಈ ಸದನದಲ್ಲಿ ವಿವರವಾದ ಚರ್ಚೆಯಾಗಿದೆ. ಅದರ ಬಗ್ಗೆ ಸರ್ಕಾರದವರು ಯಾವ ಕ್ರಮ ತೆಗೆದುಕೊಂಡಿದ್ದಾರೆ ? ಎಷ್ಟರಮಟ್ಟಿಗೆ ದುಡ್ಡು ಖರ್ಚು ಮಾಡಿದ್ದಾರೆಂಬ ಬಗ್ಗೆ ಸಾಕಷ್ಟು ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ. ಇದರ ಬಗ್ಗೆ ಎಲ್ಲಾ ಸದಸ್ಯರಿಗೂ ಕೂಡ ಸಮಾಧಾನಕರವಾದಂತಹ ಉತ್ತರ ಬೇಕಾಗಿದೆ. ಈ ವಿಷಯದ ಬಗ್ಗೆ ದೀರ್ಘ ಚರ್ಚೆಗೆ ಈ ಸದನ ಮುಗಿಯುವುದರೊಳಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಎನ್. ಕಡಪಟ್ಟಿ.—ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಟ್ಟರೆ ಒಳ್ಳೆಯದು.

ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್.—ಉತ್ತರ ಕರ್ನಾಟಕ ಪ್ರದೇಶದಲ್ಲಿ ವಿಶ್ವಬ್ಯಾಂಕ್ ನೆರವಿನಿಂದ ಪ್ರಾಜೆಕ್ಟ್ ಯಾವಾಗ ಆಗುತ್ತದೆ ? ಇದಕ್ಕೆ ಎಷ್ಟು ಖರ್ಚಾಗಿದೆ ಎಂದು ತಿಳಿಸಿದರೆ, ಸಮಾಧಾನವಾಗುತ್ತದೆ. ಅಲ್ಲಿರತಕ್ಕಂತಹ ಶಾಸಕರು ಖುದ್ದಾಗಿ ನೋಡಿ ಈ ವಿಷಯವನ್ನು ಈ ಸಭೆಯಲ್ಲಿ ಎತ್ತಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ,—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರಾದ ಶ್ರೀ ಧರ್ಮಸಿಂಗ್ ರವರು ಹೇಳಿದಂತೆ ವಿವರಣೆ ಕೊಡಬೇಕಾದುದು ಅವಶ್ಯಕ. ವಿಶ್ವಬ್ಯಾಂಕಿನ ನೆರವು ನಮಗೆ ಸಿಕ್ಕತಕ್ಕಂಥಾದ್ದು 117 ಕೋಟಿ ರೂಪಾಯಿಗಳು. ಈಗಾಗಲೇ ನಾವು ಉಪಯೋಗ ಮಾಡಿಕೊಂಡಿರುವುದು 97 ಕೋಟಿ ರೂಪಾಯಿಗಳು. ಉಳಿದದ್ದು 20 ಕೋಟಿ ರೂಪಾಯಿಗಳು. ಅದನ್ನು ಈ ವರ್ಷ ಉಪಯೋಗಮಾಡಿಕೊಳ್ಳುತ್ತೇವೆ. ಈಗ ಯು.ಕೆ.ಪಿ.ಗೆ ಖರ್ಚುಮಾಡಿರತಕ್ಕಂಥಾದ್ದು 360 ಕೋಟಿ ರೂಪಾಯಿಗಳು. ಈಗ ಕೃಷ್ಣ ಬೇಸಿನ್‌ನಲ್ಲಿ ಒಟ್ಟು ಖರ್ಚುಮಾಡಿರತಕ್ಕಂತಹ ಹಣ 704 ಕೋಟಿ ರೂಪಾಯಿಗಳು. ಯಾರಿಗೂ ತಪ್ಪು ಕಲ್ಪನೆ ಆಗುವುದು ಬೇಡವೆಂದು ಈ ವಿವರಣೆಯನ್ನು ಕೊಡುತ್ತಿದ್ದೇನೆ. ಬೇಸಿನ್‌ನಲ್ಲಿರತಕ್ಕಂತಹ ಘಟಪ್ರಭಾ ಒಂದು, ಎರಡು, ಹೊರತು 704 ಕೋಟಿ ರೂಪಾಯಿಗಳನ್ನು ಈ ಬೇಸಿನ್‌ನಲ್ಲಿ ಖರ್ಚುಮಾಡಿದ್ದೇವೆ. ಎಂದರೆ, ಒಂದು ಮತ್ತು ಎರಡು ಸ್ಟೇಜ್‌ಗಳಿಗೆ 65 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಒಟ್ಟು 769 ಕೋಟಿ ರೂಪಾಯಿಗಳನ್ನು ಈ ಬೇಸಿನ್‌ನಲ್ಲಿ ಖರ್ಚು ಮಾಡಿದ್ದೇವೆ. ಕಾವೇರಿ ಬೇಸಿನ್‌ನಲ್ಲಿ 330 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿರತಕ್ಕಂಥದ್ದು. ಇದರ ಬಗ್ಗೆ ತಮಗೆ ಸಂಶಯ ಬೇಡ. ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಲು ತಾವು ಸಿದ್ಧರಿದ್ದರೆ. ನಾನೂ ಅದಕ್ಕೆ ತಯಾರಾಗಿದ್ದೇನೆ. ಇದರ ಜೊತೆಗೆ ವಿರೋಧ ಪಕ್ಷದ ಎಲ್ಲಾ ಮಾನ್ಯ ಸದಸ್ಯರೂ ಕೂಡ ಈ ಯೋಜನೆ ನೋಡಿಕೊಂಡು ಬರಬೇಕೆಂದು ವಿನಂತಿಸುತ್ತೇನೆ. ಮತ್ತು ಅಲ್ಲಿರತಕ್ಕಂತಹ ದೋಷಗಳನ್ನು ಆ ಸ್ಥಳದಲ್ಲಿಯೇ ಹೇಳುವುದಾದರೆ, ಅದನ್ನು ಅಲ್ಲಿಯೇ ನನಗೆ ತಿಳಿಸುವುದಾದರೆ, ಅದರಲ್ಲಿರತಕ್ಕಂತಹ ದೋಷಗಳನ್ನು ಸರಿಪಡಿಸಲು ನನ್ನ ಶಕ್ತಿಮೀರಿ ಪ್ರಯತ್ನ ಮಾಡುತ್ತೇನೆಂದು ಈ ಸಭೆಯ ಮೂಲಕ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ವಿಷಯ.—ಅರಣ್ಯ ಅಭಿವೃದ್ಧಿಗಾಗಿ ಬಿಡಾಲಾದವರಿಗೆ ವಿಶೇಷ ರೀಯಾಯ್ತಿ.

ಪ್ರಶ್ನೆ ಸಂಖ್ಯೆ 28 (190) ಶ್ರೀ ಎಂ.ಎಸ್. ಕೃಷ್ಣನ್ (ರಾಜಾಜಿನಗರ).—ಈಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಅರಣ್ಯರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ಕೆಲವು ಅರಣ್ಯ ಪ್ರದೇಶ ಕೂಪಗಳನ್ನು ಅರಣ್ಯ ಅಭಿವೃದ್ಧಿಗೋಸ್ಕರ ಹರಿಹರ ಪಾಳ್ಯೆಬರ್ ಸಂಸ್ಥೆಗೆ ಮತ್ತು ಬಿರ್ಲಾ ಕಂಪನಿಗಳಿಗೆ ಕೊಡಲಾಗಿದೆಯೆ ? ಹಾಗಿದ್ದಲ್ಲಿ ಯಾವ ಷರತ್ತುಗಳ ಮೇಲೆ ಈ ಪ್ರದೇಶಗಳನ್ನು ಕೂಪುಗಳನ್ನು ಕೊಡಲಾಗಿದೆ ;